# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

## ಸಿ.ಸಿ ನಂಃ 16/ 2024

| | | |
|---|---|---|
| ಸಾಕ್ಷಿಯ ಹೆಸರಃ | ಶ್ರೀ ಶ್ರಿಶೈಲ ಅಂಬಾಟಿ | ಪ್ರಾಸಾಃ 01 |
| ತಂದೆಯ ಹೆಸರುಃ | ಶಾಂತಪ್ಪ | ಚಾಸಾಃ 01 |
| ವಯಸ್ಸುಃ | 35 ವರ್ಷ | ದಿಃ 23-09-2025 |
| ಉದ್ಯೋಗಃ | ಪಿ ಎಸ್ ಐ ಚಿತ್ತಾಪೂರ ಪೊ.ಠಾಣೆ | ಸಾಕ್ಷಿದಾರರಿಗೆ ಪ್ರಮಾಣ ವಚನ  ಬೋಧಿಸಲಾಯಿತು. |
| ವಾಸ ಸ್ಥಳಃ | ಚಿತ್ತಾಪೂರ | |

## ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕಲ 16.06.2021 ರಿಂದು 02.02.2022 ವರೆಗೆ ಗುರುಮಠಕಲ್ ಪೊ.ಠಾಣೆಯಲಿಲ ಆರಕ್ಷಕ ಉಪ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 21.11.2021 ರಂದು ಮಃ 1.30 ಗಂಟೆಗೆ ನಾನು ಕಚೇರಿಯಲ್ಲಿದ್ದಾಗ ಶಿವಪುರ ಗ್ರಾಮದ ಬಸ್ ನಿಲ್ದಾಣದ ಮುಂದೆ ಒಬ್ಬ ವ್ಯಕ್ತಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ನಾನು ಚಾಸಾಃ 4 ರವರ ಮೂಲಕ ಚಾಸಾಃ 2 ಮತ್ತು 3 ರವರನ್ನು ಠಾಣೆಗೆ ಕರೆಸಿಕೊಂಡು ಬಂದ ಮಾಹಿತಿಸಿಯನ್ನು ತಿಳಿಸಿ ಅವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದೆನು. ಚಾಸಾಃ 4 ರಿಂದ 6 ರವರಿಗೂ ಮಾಹಿತಿಯನ್ನು ತಿಳಿಸಿ ಅವರನ್ನು ಮತ್ತು ಪಂಚರನ್ನು ಕರೆದುಕೊಂಡು ಶಿವಪೂರ ಗ್ರಾಮದ ಬಸ್ ನಿಲ್ದಾಣದ ಸ್ವಲ್ಪ ದೂರ ತಲುಪಿ ವಾಹನ ನಿಲ್ಲಿಸಿ ಕೆಳಗಿಳಿದು ಮರೆಯಾಗಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಬಿಳಿ ದ್ರಾವಣ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಾವುಗಳು ದಾಳಿ ಮಾಡಿ ಮಾರಾಟ ಮಾಡುತಿದ್ದ ಆರೋಪಿಯನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ಈಶಣ್ಣ ತಂದೆ ಮಲ್ಲಯ್ಯ ಕಲಾಲ್ ಎಂದು ತಿಳಿಸಿದ್ದು ಆತನ ವಶದಲ್ಲಿ ಇದ್ದ ಕಳ್ಳಭಟ್ಟಿ ಸಾರಾಯಿಯನ್ನು

ಅಳತೆ ಮಾಡಿ ನೋಡಿದಾಗ 04 ಲೀ. ಇರುವುದು ಕಂಡುಬಂದಿರುತ್ತದೆ. ಆ ಪೈಕಿ ಒಂದು ಲೀಟರನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೆನು. ಆರೋಪಿಯ ಅಂಗಶೋಧನೆ ಮಾಡಿದಾಗ ರೂ.110/- ನಗದು ಹಣ ಸಿಕ್ಕಿದ್ದು ಕಳ್ಳಟ್ಟಿ ಮಾರಾದಿಂದ ಬಂದ ಹಣವಾಗಿರುತ್ತದೆ ಎಂದು ಆರೋಪಿ ತಿಳಿಸಿದ್ದರು. ಸ್ಥಳದಲ್ಲಿ ಮಃ 2.30 ರಿಂದ 3.30 ವರೆಗೆ ಪಂಚನಾಮೆ ಮಾಡಿ ಲ್ಯಾಪಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆದುಕೊಂಡಿದ್ದೆವು. ನಂತರ ಆರೋಪಿ ಹಾಗೂ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ನೀಡಿದ್ದೆನು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆತ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದ ವ್ಯಕ್ತಿ ಅಗಿರುತ್ತಾನೆ ಎಂದು ನುಡಿಯುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ಪ್ಲಾಸ್ಟಿಕ್ ಬಾಟಲಿಯನಲ್ನು ನೋಡಿ ಅದು ಮಾದರಿ ಸಾರಾಯಿ ಬಾಟಲಿ ಆಗಿರುತ್ತದೆ ಎಂದು ನುಡಿದಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**

**ಯಾದಗಿರಿ**

# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 16/ 2022**

| | | |
|---|---|---|
| **ಸಾಕ್ಷಿಯ ಹೆಸರುಃ** | **ಶ್ರೀ ನರಸಿಂಹ** | **ಪ್ರಾಸಾಃ 02** |
| **ತಂದೆ ಹೆಸರುಃ** | **ನರಸಪ್ಪ** | **ಚಾಸಾಃ 02** |
| **ವಯಸ್ಸುಃ** | **38 ವರ್ಷ** | **ದಿಃ 23-09-2025** |
| **ಉದ್ಯೋಗಃ** | **ಒಕ್ಕಲುತನ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಗುರುಮಠಕಲ** | |

## ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಚಾಸಾಃ 3 ರವರ ಪರಿಚಯ ಇಲ್ಲ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯವೂ ಸಹ ಇಲ್ಲ. ಈಗ ಮೂರು ವರ್ಷಗಳ ಹಿಂದೆ ನಾನು ಹಾಗೂ ಒಬ್ಬ ಪೋಲಿಸರು ಆರೋಪಿಯನ್ನು ಸಾರಾಯಿ ವಿಷಯಕ್ಕಾಗಿ ಗುರುಮಠಕಲ್ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದಿದ್ದರು. ಪೋಲಿಸರು ಒಂದು 5 ಲೀ. ಕ್ಯಾನನ್ನು ಸಹ ಪೋಲಿಸ್ ಠಾಣೆಗೆ ತೆಗೆದುಕೊಂಡು ಬಂದಿದ್ದರು. ಸಾಕ್ಷಿ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರ ಪಂಚನಾಮೆಯಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ದಿನಾಂಕ 21.11.2021 ರಂದು ಪೋಲಿಸರು ನನ್ನನ್ನು ಮತ್ತು ಚಾಸಾಃ 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಶಿವಪೂರ ಗ್ರಾಮದ

ಬಸ್ ನಿಲ್ದಾಣದ  ಹತ್ತಿರ ಆರೋಪಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾಗ ಆತನನ್ನು ಪೋಲಿಸರು ನನ್ನ ಸಮಕ್ಷಮ ಹಿಡಿದಿದ್ದರು ಎಂದರೆ ಸರಿ. ಒಂದು ಹಳದಿ ಬಣ್ಣದ 5 ಲೀ. ಕ್ಯಾನಿನಲ್ಲಿ 4 ಲೀ. ಕಳ್ಳಭಟ್ಟಿ ಸಾರಾಯಿ ಇತ್ತು ಹಾಗೂ ಅದರಿಂದ 1 ಲೀ ನ್ನು ಪೋಲಿಸರು ಮಾದರಿಯಾಗಿ ತೆಗೆದುಕೊಂಡಿದ್ದರು ಎಂದರೆ ಸರಿ. ಆರೋಪಿಯ ಹತ್ತಿರ ಇದ್ದ  ಕಳ್ಳಭಟ್ಟಿ ಸಾರಾಯಿ ಮಾರಾಟದಿಂದ ಬಂದ ರೂ.110/- ಹಣವನ್ನು ಪೋಲಿಸರು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿ. ಸ್ಥಳದಲ್ಲಿ ಮಃ 2.30 ರಿಂದ 3.30 ಗಂಟೆ ವರಗೆ ವರೆಗೆ ಪೋಲಿಸರು ಪಂಚನಾಮೆ ಮಾಡಿ ನನಗೆ ಓಡಿ ಹೇಳಿದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೆನು ಎಂದರೆ ಸರಿ. ಮು.ಮಾ 1 ರ ಬಾಟಲಿಯನ್ನು ಸಾಕ್ಷಿಗೆ ತೋರಿಸಿ ಅದು ಮಾದರಿ ಸಾರಾಯಿ ಬಾಟಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ.  ಆರೋಪಿಯಿಂದ ವಶಪಡಿಸಿಕೊಂಡ ರೂ.110 ಹಣವನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ.**